ಈಗ 650ಕ್ಕೆ ಬಂದು ನಿಂತಿದೆ. ಇದರ ಮಧ್ಯೆ ಈ ಹೀರೋಗಳು ಹೀಗೆ ಟೀವಿ ರಿಯಾಲಿಟಿ ಷೋಗಳಲ್ಲಿ ಹೋಗಿ ಕುಳಿತರೆ ಸಿನಿಮಾ ನಿರ್ಮಾಪಕರು ಏನು ಮಾಡಬೇಕು? ನಿರ್ಮಾಪಕರು ಬಂದು ದೂರು ಕೊಟ್ಟಿದ್ದಾರೆ. ವಾಣಿಜ್ಯ ಮಂಡಳಿ ಅದನ್ನು ಗಂಭೀರವಾಗಿ ಪರಿಗಣಿಸಿದೆ. ನಮ್ಮ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಕೈಗೊಂಡ ತೀರ್ಮಾನದಂತೆ ಧರಣಿ ನಡೆಸಿದ್ದೇವೆ.'

'ಅದೂ ಸರಿಯಾಗಿ ಸೂರ್ಯ ಮುಳುಗಿದ ಬಳಿಕ ಈ ರಿಯಾಲಿಟಿ ಷೋಗಳು ಆರಂಭವಾಗುತ್ತವೆ. ಥಿಯೇಟರುಗಳಲ್ಲಿ ಇರುವ ನಾಲ್ಕು ಷೋಗಳಲ್ಲಿ ರಾತ್ರಿಯ ಎರಡು ಷೋಗಳು ಖಾಲಿ ಹೊಡೆದರೆ ಪ್ರದರ್ಶಕರು ಎಲ್ಲಿಗೆ ಹೋಗಬೇಕು? ರಿಯಾಲಿಟಿ ಷೋಗಳಲ್ಲಿ ಹೀರೋಗಳ ಕುಣಿತ, ಮಾತಿನ ಚಟಾಕಿ, ನಗೆಬುಗ್ಗೆ ಎಲ್ಲವನ್ನೂ ನೋಡುತ್ತಾ ಜನರು ಸಿನಿಮಾ ನೋಡೋದನ್ನೇ ಮರೆಯುತ್ತಿದ್ದಾರೆ. ಕನ್ನಡ ಸಿನಿಮಾಗಳಿಗೆ ದುಡ್ಡು ಸುರಿಯುತ್ತಿರುವ ನಿರ್ಮಾಪಕರ ಕಡೆಗೂ ನಾವು ನೋಡಬೇಡವೆ? ಹೀರೋಗಳೇ ತಮ್ಮ ಸಿನಿಮಾಗಳಿಗೆ ಹೀಗೆ ಟೀವಿ ಷೋ ಮೂಲಕ ಅಡ್ಡಿ ಒಡ್ಡುವುದು ಸರಿಯೆ? ಟೀವಿಗೆ ಹೋಗುವುದಕ್ಕಿಂತ ಮುಂಚೆ ಇವರೆಲ್ಲ ಎಲ್ಲಿಂದ ಖ್ಯಾತಿ ಪಡೆದವರು... ಚಿತ್ರರಂಗದಿಂದಲೇ ಅಲ್ವೆ? ಹಾಗಿರುವಾಗ ಚಿತ್ರೋದ್ಯಮ ಕುಸಿಯಲು ಇವರು



ಉದಯ ಟಿವಿಯ ಶೋ ಕಾರ್ಯಕ್ರಮದಲ್ಲಿ ಶಿವರಾಜ್‌ಕುಮಾರ್

> 'ಟೀವಿ ರಿಯಾಲಿಟಿ ಷೋಗಳಿಗೆ ಬಂದು ಕುಳಿತು ಸಿನಿಮಾ ನಿರ್ಮಾಪಕರು ತಮ್ಮ ಹೊಸ ಸಿನಿಮಾಗಳನ್ನು ಪ್ರಮೋಟ್ ಮಾಡುತ್ತಿಲ್ಲವೆ? ನಾವು ಭಾಗವಹಿಸದಂತೆ ತಡೆಯಲು ಅವರಿಗೇನು ಹಕ್ಕಿದೆ?'
>
> – ಪ್ರಿಯಾಮಣಿ



ಕಾರಣರಾಗುವುದು ಸರಿಯೆ?' ಎನ್ನುವುದು ಅವರ ಪ್ರಶ್ನೆಗಳು.

'ಆದರೆ ಹೀರೋಗಳ ಸಿನಿಮಾಗಳು ಓಡುತ್ತಿಲ್ಲ ಎಂದು ಹೇಗೆ ಹೇಳುತ್ತೀರಿ? ಟೀವಿ ರಿಯಾಲಿಟಿ ಷೋಗಳ ಮಧ್ಯೆಯೇ ಶಿವರಾಜ್‌ಕುಮಾರ್, ಯಶ್, ಪುನೀತ್ ರಾಜ್‌ಕುಮಾರ್, ಸುದೀಪ್ ಮುಂತಾದವರ ಹೊಸ ಸಿನಿಮಾಗಳಿಗೆ ಒಳ್ಳೆಯ ಓಪನಿಂಗ್ ಸಿಕ್ಕಿದೆಯಲ್ಲ? ಲಾಭ ಮಾಡಿದೆಯಲ್ಲ? ' ಎಂದು ಪ್ರಶ್ನಿಸಿದರೆ ಗೋವಿಂದು ಅವರ ಉತ್ತರ ಇನ್ನೊಂದು ಮಗ್ಗುಲಿಗೆ ಹೊರಳುತ್ತದೆ.

'ಬರೀ ಹೀರೋಗಳದ್ದೇ ಸಿನಿಮಾಗಳು ಬರುತ್ತಿಲ್ಲ ಸಾರ್. ವರ್ಷಕ್ಕೆ 150ಕ್ಕೂ ಹೆಚ್ಚು ಕನ್ನಡ ಸಿನಿಮಾಗಳು ತಯಾರಾಗುತ್ತಿವೆ. ಕಳೆದ ವಾರ ಒಂದೇ ದಿನ 40ಕ್ಕೂ ಹೆಚ್ಚು ಕನ್ನಡ ಸಿನಿಮಾಗಳ ಶೂಟಿಂಗ್ ನಡೆದಿದೆ ಗೊತ್ತಾ? ದೊಡ್ಡ ಹೀರೋಗಳಲ್ಲದ ಎಷ್ಟೊಂದು ನಟ– ನಟಿಯರು ಕನ್ನಡದಲ್ಲಿದ್ದಾರೆ. ಉದ್ಯಮದಲ್ಲಿ ಕೆಲಸ ಮಾಡುವ ಸಾವಿರಾರು ತಂತ್ರಜ್ಞರಿದ್ದಾರೆ. ಇವರ ಹೊಟ್ಟೆಪಾಡನ್ನೂ ನೋಡಬೇಕಲ್ಲ?'

'ಯಾವುದೋ ಕೆಲವು ಮನರಂಜನಾ ಚಾನೆಲ್‌ಗಳು ಮಾತ್ರ ರಿಯಾಲಿಟಿ ಷೋ ಗಳನ್ನು ಪ್ರಸಾರ ಮಾಡುತ್ತಿವೆ ಅನ್ನೋ ಹಾಗೂ ಇಲ್ಲ. ನ್ಯೂಸ್ ಚಾನೆಲ್‌ಗಳೂ ಬೆಳಿಗ್ಗೆಯಿಂದಲೇ ಆ ರಿಯಾಲಿಟಿ ಷೋಗಳ ತುಣುಕುಗಳನ್ನು, ಕಲಾವಿದರನ್ನು ಇಟ್ಟುಕೊಂಡು ಬೇರೆ ಬೇರೆ ಎಂಜಲು ಕಾರ್ಯಕ್ರಮಗಳನ್ನು ನಡೆಸುತ್ತಿವೆ. ಬೆಳಿಗ್ಗೆಯ ಸಿನಿಮಾ ಷೋ ನೋಡಲೂ ಜನ ಹೋಗಬಾರದು ಎಂಬಂತೆ ಇವರ ವರ್ತನೆ ಇದೆ. ದಿನದ ಇತರ ಸಮಯದಲ್ಲೂ ಇದರ ರಿಪೀಟ್ ಇರುತ್ತದೆ. ಹೀಗಾದರೆ ಹೇಗೆ?' ಎನ್ನುವುದು ಸಾ.ರಾ.ಗೋವಿಂದು ಅವರ ಪ್ರಶ್ನೆ.

ನಟ, ನಿರ್ಮಾಪಕ, ಕಲಾವಿದರ ಸಂಘದ ಉಪಾಧ್ಯಕ್ಷ ರಾಕ್‌ಲೈನ್ ವೆಂಕಟೇಶ್ ಕೂಡಾ ನಿರ್ಮಾಪಕರ ನೋವಿಗೆ ಧ್ವನಿ ಕೂಡಿಸುತ್ತಾರೆ. 'ಒಂದು ಕಡೆ ನಾವು ಪರಭಾಷೆಗಳ ಚಿತ್ರಗಳ ಜತೆಗೆ ಸ್ಪರ್ಧೆ ನಡೆಸಬೇಕು. ಇನ್ನೊಂದೆಡೆ ಹೀರೋಗಳೇ ತಮ್ಮ ಸಿನಿಮಾಗಳಿಗೆ ಟೀವಿ ಷೋಗಳ ಮೂಲಕ ಸ್ಪರ್ಧೆ ಕೊಡುತ್ತಿದ್ದಾರೆ. ಹೀಗಾದರೆ ಉದ್ಯಮ ಬದುಕುವುದು ಹೇಗೆ? ರಿಯಾಲಿಟಿ ಷೋಗಳನ್ನು ಮಾಡಲಿ, ಆದರೆ ಅದರ ಪ್ರಸಾರ ರಾತ್ರಿ 10 ಗಂಟೆಯ ಬಳಿಕ ಆಗುವಂತೆ ನೋಡಿಕೊಳ್ಳಲಿ. ರಿಯಾಲಿಟಿ ಷೋಗಳಲ್ಲಿ ಭಾಗವಹಿಸುವ ಹೀರೋಗಳ ಸಿನಿಮಾಗಳ ಮೇಲೆ ನಿರ್ಮಾಪಕರು ಎಷ್ಟೊಂದು ಬಂಡವಾಳ ಹೂಡಿರುತ್ತಾರೆ! ಹಾಗಿರುವಾಗ ಅವರು ಟೀವಿ ಯಲ್ಲಿ ಹಣ ಸಿಗುತ್ತದೆ ಎನ್ನುವ ಏಕೈಕ ಕಾರಣಕ್ಕೆ ಸಿನಿಮಾಗಳ ಹಿತಾಸಕ್ತಿಯ ವಿರುದ್ಧ ಹೋಗುವುದು ಸರಿಯಲ್ಲ. ಮೊದಲ ಆದ್ಯತೆ ಸಿನಿಮಾಗಳಿಗೇ ಕೊಡಬೇಕು' ಎನ್ನುತ್ತಾರೆ ರಾಕ್‌ಲೈನ್ ವೆಂಕಟೇಶ್.

'ಇಲ್ಲಿ ನಿರ್ಮಾಪಕರಿಗೆ ತೊಂದರೆ ಆಗುತ್ತಿರುವ ಇನ್ನೂ ಒಂದು ಅಂಶವಿದೆ. ಹಿಂದೆಲ್ಲ ಟೀವಿ ಚಾನೆಲ್‌ನವರು ಒಳ್ಳೆಯ ರೇಟ್ ಕೊಟ್ಟು ಕನ್ನಡ ಸಿನಿಮಾಗಳನ್ನು ಖರೀದಿಸುತ್ತಿದ್ದರು. ಅವುಗಳನ್ನು ಟೀವಿಯಲ್ಲಿ ತೋರಿಸುತ್ತಿದ್ದರು. ಈಗ ರಿಯಾಲಿಟಿ ಷೋಗಳಲ್ಲೇ ಸಿನಿಮಾ ಹೀರೋಗಳು ಇರುವುದರಿಂದ ಹಿಂದಿನ ಹಾಗೆ ಸಿನಿಮಾಗಳನ್ನು ಖರೀದಿಸುವುದನ್ನೂ ನಿಲ್ಲಿಸಿಬಿಟ್ಟಿದ್ದಾರೆ. ನಿರ್ಮಾಪಕರಿಗೆ ಇದೂ ದೊಡ್ಡ ಹೊಡೆತ' ಎಂದು ರಾಕ್‌ಲೈನ್ ಬೊಟ್ಟು ಮಾಡುತ್ತಾರೆ.

ಸಿನಿಮಾಗಳಿಗೆ ಜನ ಬರುತ್ತಿಲ್ಲ ಎಂದು ಟೀವಿ ಷೋಗಳನ್ನು ನಿಯಂತ್ರಿಸುವುದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಎಷ್ಟು ಸರಿ?

'ಇಲ್ಲಿ ನಿಯಂತ್ರಣದ ಪ್ರಶ್ನೆಯಿಲ್ಲ. ನಮ್ಮದು ಹೀರೋಗಳಲ್ಲಿ ವಿನಂತಿ,